ಭಾರತದ ಗ್ಯಾಸೆಟಿಯರ್

ಕರ್ನಾಟಕ ರಾಜ್ಯ

# ವಿಜಾಪುರ ಜಿಲ್ಲೆ

## (ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ)

(ಪರಿಷ್ಕೃತ ಆವೃತ್ತಿ)

ಭಾರತ ಸರಕಾರ

ಕರ್ನಾಟಕ ರಾಜ್ಯ ಗ್ಯಾಸೆಟಿಯರ್

# ವಿಜಾಪುರ ಜಿಲ್ಲೆ

## (ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ)

(ಪರಿಷ್ಕೃತ ಆವೃತ್ತಿ)

ಮುಖ್ಯ ಸಂಪಾದಕರು

ಡಾ. ಆರ್. ಮುನಿಸ್ವಾಮಿ

ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ

ವಿಜಾಪುರ ಜಿಲ್ಲಾ ಗ್ಯಾಸೆಟಿಯರ್
(ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ)
© ಕರ್ನಾಟಕ ರಾಜ್ಯ ಸರಕಾರ
ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್
ಎಂಟನೆಯ ಮಹಡಿ, ಜಲಮಂಡಳಿ ಕಟ್ಟಡ
ಕಾವೇರಿ ಭವನ
ಬೆಂಗಳೂರು-೫೬೦ ೦೦೯

Bijapur District Gazetteer
(Including Bagalkot District)
**© Government of Karnataka**
Office of the Chief Editor
Karnataka Gazetteer
Eighth floor, BWSSB Building
Cauvery Bhavan
Bangalore-560 009

೧೯೯೯

ಪ್ರತಿಗಳು ದೊರೆಯುವ ಸ್ಥಳ

ನಿರ್ದೇಶಕರು
ಸರಕಾರಿ ಕೇಂದ್ರ ಪುಸ್ತಕ ಮಳಿಗೆ,
ಡಾ. ಅಂಬೇಡ್ಕರ್ ವೀದಿ
ಬೆಂಗಳೂರು- ೫೬೦ ೦೦೧

ಮುಖ್ಯ ಸಂಪಾದಕರ ಕಚೇರಿ
ಕರ್ನಾಟಕ ಗ್ಯಾಸೆಟಿಯರ್
ಎಂಟನೆಯ ಮಹಡಿ, ಜಲಮಂಡಳಿ ಕಟ್ಟಡ
ಕಾವೇರಿ ಭವನ, ಬೆಂಗಳೂರು- ೫೬೦ ೦೦೯

ಉಪ ನಿರ್ದೇಶಕರು
ಸರಕಾರಿ ಶಾಖಾ ಮುದ್ರಣಾಲಯಗಳು
ಧಾರವಾಡ ಮತ್ತು ಗುಲಬರ್ಗಾ.

ಮುದ್ರಕರು
ಮೆ॥ ಅಭಿಮಾನಿ ಪ್ರಕಾಶನ
ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು-೫೬೦ ೦೧೦.

# ಮುನ್ನುಡಿ

**ಪಂ**ಚನದಿಗಳ ನಾಡು, ಬಿಳಿ ಜೋಳ, ಗೋಧಿ, ಕುಸುಬಿ, ಹತ್ತಿಗಳ ಪೆರ್ನಾಡು, ವಿಭಿನ್ನ ಸಂಸ್ಕೃತಿಗಳ ಬೀಡು ಎಂದೆಲ್ಲಾ ಖ್ಯಾತಿ ಪಡೆದಿರುವ ವಿಜಾಪುರ ಜಿಲ್ಲೆಯು ಅಮೀನಗಡದ ಕರದಂಟು, ಮಹಾಲಿಂಗಪುರದ ಬೆಲ್ಲ ಮತ್ತು ಜಮಖಾನೆ, ಇಳಕಲ್ಲಿನ ಸೀರೆ ಮತ್ತು ಪಿಂಕ್ ಗ್ರಾನೈಟ್, ಗುಳೇದಗುಡ್ಡದ ಖಣ, ಕಮತಗಿಯ ರೇಷ್ಮೆ ಪಟಗಾ, ಕೆರೂರಿನ ಕೌದಿ, ಕುಂದರಗಿಯ ಉಣ್ಣೆ ಕಂಬಳಿ, ಬಾಗಲಕೋಟೆಯ ಸಿಮೆಂಟ್, ಮುಧೋಳದ ನಾಯಿ ತಳಿ ಮುಂತಾದವುಗಳಿಂದಲೂ ಪ್ರಸಿದ್ಧವಾಗಿದೆ. ಇದು ೧೮೮೫ರಲ್ಲಿ ಜಿಲ್ಲಾ ಕೇಂದ್ರವಾಗುವುದಕ್ಕೆ ಮೊದಲು, ಎಂಟು ತಾಲೂಕುಗಳನ್ನೊಳಗೊಂಡ ಕಲಾದಗಿ ಜಿಲ್ಲೆಯು ೧೮೬೪ರಿಂದಲೇ ಅಸ್ತಿತ್ವದಲ್ಲಿದ್ದು, ೧೯೪೭ರ ನಂತರ ಬೀಳಗಿ, ಮುಧೋಳ ಹಾಗೂ ಜಮಖಂಡಿಗಳ ಸೇರ್ಪಡೆಯಿಂದಾಗಿ ತಾಲೂಕುಗಳ ಸಂಖ್ಯೆ ಹನ್ನೊಂದಾಗಿ, ಭೌಗೋಳಿಕವಾಗಿ ರಾಜ್ಯದ ಅತ್ಯಂತ ದೊಡ್ಡ ಜಿಲ್ಲೆ ಎಂಬ ಹೆಗ್ಗಳಿಕೆಯೂ ಲಭಿಸಿತು. ಆದರೆ ೧೯೯೭ರ ಜಿಲ್ಲಾ ವಿಭಜನೆಯಿಂದಾಗಿ ಆ ಹೆಗ್ಗಳಿಕೆಯೂ ಹೋಯಿತು

ಇಂದು ಜಿಲ್ಲಾ ಕೇಂದ್ರವಾಗಿರುವ ವಿಜಾಪುರವು ಚಾರಿತ್ರಿಕವಾಗಿ ಬಾದಾಮಿ ಚಾಳುಕ್ಯರಷ್ಟು ಪ್ರಾಚೀನವಾಗಿದ್ದು, ಕ್ರಿ.ಶ. ೧೧-೧೨ನೆಯ ಶತಮಾನದ ಶಾಸನಗಳಲ್ಲಿ ವಿಜಯಾಪುರ, ರಾಜಧಾನಿ ವಿಜಯಾಪುರ, ರಾಯರಾಜಧಾನಿ ವಿಜಯಾಪುರ ಎಂದೆಲ್ಲಾ ಉಲ್ಲೇಖಿತಗೊಂಡಿದ್ದು, ಕಲ್ಯಾಣದ ಚಾಳುಕ್ಯ ಹಾಗೂ ಸೇಉಣರ ಕಾಲದಲ್ಲಿ ಪ್ರಾದೇಶಿಕ ರಾಜಧಾನಿಯಾಗಿತ್ತು. ಆದಿಲ್‌ಷಾಹಿ ಸಾಮ್ರಾಜ್ಯದ ರಾಜಧಾನಿಯಾಗಿ, ದಖನ್ನಿನ ರಾಣಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದ್ದ ಇದಕ್ಕೆ, ಆಗ ವಿದ್ಯಾಪುರ, ಬಡ್ಯಾಪುರ, ಮಹ್ಮದೀಪುರ ಎಂಬ ಹೆಸರುಗಳಿದ್ದು, ಪರ್ಷಿಯನ್ ಗ್ರಂಥಗಳಲ್ಲಿ ದರೂಲ್ ಜಾಫರ್ ಎಂದು ಕರೆಯಲಾಗಿದೆ. ಹೀಗೆ ವಿಜಾಪುರದ ಹೆಸರನ್ನು ಬದಲಿಸುವ ಯತ್ನಗಳು ನಡೆದವಾದರೂ ಅಂತಿಮವಾಗಿ ಪ್ರಾಚೀನ ಹೆಸರಾದ ವಿಜಾಪುರವೇ ಇಂದಿಗೂ ಉಳಿದು ಬಂದಿದೆ. ವಿಜಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಈ ಹಿಂದೆ ಜೇಮ್ಸ್ ಎಂ. ಕ್ಯಾಂಬೆಲ್ ಅವರು ಆಂಗ್ಲ ಭಾಷೆಯಲ್ಲಿ ಸಂಪಾದಿಸಿದ ವಿಜಾಪುರ ಜಿಲ್ಲಾ ಗ್ಯಾಸೆಟಿಯರನ್ನು ಮುಂಬಯಿ ಸರ್ಕಾರ ೧೮೮೪ರಲ್ಲಿ ಪ್ರಕಟಿಸಿದ್ದು, ವೆಂಕಟ ರಂಗೋ ಕಟ್ಟೀ ಅವರು ಪರಿಷ್ಕರಿಸಿ, ಸಿದ್ಧಪಡಿಸಿದ ಅದರ ಕನ್ನಡ ಆವೃತ್ತಿಯು ೧೮೯೩ರಲ್ಲಿ ಪ್ರಕಟಗೊಂಡಿತು. ಆನಂತರ ಶ್ರೀ ಬಿ.ಎನ್. ಸತ್ಯನ್ ಅವರು ಆಂಗ್ಲ ಭಾಷೆಯಲ್ಲಿ ಸಂಪಾದಿಸಿದ ವಿಜಾಪುರ ಜಿಲ್ಲಾ ಗ್ಯಾಸೆಟಿಯರನ್ನು ಗ್ಯಾಸೆಟಿಯರ್ ಇಲಾಖೆಯು ೧೯೬೬ರಲ್ಲಿ ಪ್ರಕಟಿಸಿತು. ಎರಡು ವರ್ಷಗಳ ಹಿಂದೆ, ವಿಜಾಪುರ ಜಿಲ್ಲಾ ಗ್ಯಾಸೆಟಿಯರಿನ ಪುನರ್ ಪರಿಷ್ಕೃತ ಕನ್ನಡ ಆವೃತ್ತಿಯನ್ನು ಹೊರತರುವ ಕಾರ್ಯಯೋಜನೆಯನ್ನು ಈ ಇಲಾಖೆಯು ಕೈಗೆತ್ತಿಕೊಂಡಾಗ, ಜಿಲ್ಲೆಯು ಇನ್ನೂ ವಿಭಜನೆಗೊಂಡಿರಲಿಲ್ಲ. ನಿಗದಿತ ಕಾರ್ಯಕ್ರಮದಂತೆ ಜಿಲ್ಲಾ ಗ್ಯಾಸೆಟಿಯರಿನ ಪ್ರಕಟಣೆಗೆ ಪೂರಕವಾದ ಮಾಹಿತಿ ಸಂಗ್ರಹಣಾ ಕಾರ್ಯವೂ ನಡೆದಿತ್ತು. ಮುಂದೆ ೧೯೯೭ರಲ್ಲಿ ವಿಜಾಪುರ ಜಿಲ್ಲೆಯು ವಿಭಜಿಸಲ್ಪಟ್ಟು ವಿಜಾಪುರ ಹಾಗೂ ಬಾಗಲಕೋಟೆ ಪ್ರತ್ಯೇಕ ಜಿಲ್ಲೆಗಳಾದವು. ಈ ವಿಭಜನೆಯಿಂದಾಗಿ ಬಾಗಲಕೋಟೆ ಜಿಲ್ಲೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಕ್ರೋಢೀಕೃತ ಅಂಕಿ-ಅಂಶಗಳು ಪ್ರತ್ಯೇಕವಾಗಿ ಲಭಿಸುವ ಸಾಧ್ಯತೆಗಳಿರಲಿಲ್ಲ. ಅದರಿಂದಾಗಿ ಅನಿವಾರ್ಯವಾಗಿ ಪೂರ್ವಯೋಜಿತ ಕಾರ್ಯಕ್ರಮದಂತೆ ವಿಭಜನಾ ಪೂರ್ವ ವಿಜಾಪುರ ಜಿಲ್ಲಾ ಗ್ಯಾಸೆಟಿಯರಿನ ಸಂಪಾದನಾ ಕಾರ್ಯವನ್ನು ಪೂರೈಸಿರುವ ಇಲಾಖೆಯು ಇದನ್ನು ಪ್ರಕಟಿಸುತ್ತಿದೆ. ಇದನ್ನು ತಯಾರಿಸುವಲ್ಲಿ ಬಹುತೇಕ ೧೯೯೭-೯೮ರ ಸಾಲಿನವರೆಗಿನ ಅಂಕಿ-ಅಂಶಗಳನ್ನು ಬಳಸಿಕೊಳ್ಳಲಾಗಿದೆ.

ಒಟ್ಟು ೧೩೨೮ ಪುಟಗಳನ್ನು ಹೊಂದಿರುವ ಈ ಬೃಹತ್ ಕೃತಿಯು ವೈವಿಧ್ಯಮಯ ವಿಷಯಗಳನ್ನೊಳಗೊಂಡ ೧೭ ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯ ಭೌಗೋಳಿಕ ಲಕ್ಷಣ, ಹವಾಗುಣ, ನೈಸರ್ಗಿಕ ಸಂಪನ್ಮೂಲ ಮುಂತಾದ ವಿಷಯಗಳನ್ನು ಪರಿಚಯಿಸಿದರೆ, ಎರಡನೆಯ ಅಧ್ಯಾಯ ಜಿಲ್ಲೆಯ ಇತಿಹಾಸವನ್ನು ಆದಿ ಹಳೆಶಿಲಾಯುಗ ಮಾನವನಿಂದ ಏಕೀಕೃತ ಕರ್ನಾಟಕ ರೂಪುಗೊಳ್ಳುವವರೆಗಿನ ವಿವಿಧ ಹಂತಗಳನ್ನು ಮೂಲ ಆಕರಗಳನ್ನಾಧರಿಸಿ ಪುನರ್‌ರಚಿಸಲು ಯತ್ನಿಸುತ್ತದೆ. ಶಿಲಾಯುಗ ಸಂಸ್ಕೃತಿಯ ನಿವೇಶನಗಳನ್ನು ಅಧಿಕ ಸಂಖ್ಯೆಯಲ್ಲಿ ಹೊಂದಿರುವ ಕೀರ್ತಿ ಈ ಜಿಲ್ಲೆಗೆ ಸಲ್ಲುತ್ತದೆ.

ಕರ್ನಾಟಕ ಚಕ್ರಾಧಿಪತ್ಯದ ಕೀರ್ತಿ ಪತಾಕೆಯನ್ನು ಮುಗಿಲೆತ್ತರಕ್ಕೆ ಏರಿಸಿದ ಬಾದಾಮಿ ಚಾಲುಕ್ಯರ, ವಿಜಾಪುರವನ್ನು ರಾಜಧಾನಿಯನ್ನಾಗಿಸಿಕೊಂಡು ವಿಶಿಷ್ಟ ದಖನಿ ಸಂಸ್ಕೃತಿಯ ಉಗಮಕ್ಕೆ ನಾಂದಿ ಹಾಡಿದ ಆದಿಲ್‌ಷಾಹಿಗಳ, ಮುಧೋಳ ಹಾಗೂ ಜಮಖಂಡಿಗಳಂತಹ ಸಂಸ್ಥಾನಗಳ ಜಿಲ್ಲೆ ಇದಾಗಿದೆ. ವೀರಶೈವ ಆಂದೋಲನದ ಮುಂದಾಳತ್ವ ವಹಿಸಿದ್ದ ಬಸವಣ್ಣ, ಹಾವಿನಾಳ ಕಲ್ಲಯ್ಯ, ಅಕ್ಕನಾಗಮ್ಮ ಮುಂತಾದವರು ಮತ್ತು ದಾಸ ಪರಂಪರೆಗೆ ಸೇರಿದ ಮಹಿಪತಿದಾಸರು ಇಲ್ಲಿಯವರು. ಸ್ವಾತಂತ್ರ್ಯ ಸಂಗ್ರಾಮದಲ್ಲೂ ಜಿಲ್ಲೆಯ ಪಾತ್ರ ಹಿರಿದಾಗಿದ್ದು, ಈ ಎಲ್ಲಾ ಅಂಶಗಳನ್ನು ಇಲ್ಲಿ ದಾಖಲಿಸಲು ಯತ್ನಿಸಲಾಗಿದೆ. ಈ ಅಧ್ಯಾಯದ ಕೊನೆಯಲ್ಲಿ ೧೯೫೭ ರಿಂದ ೧೯೯೯ ವರೆಗಿನ ಜಿಲ್ಲೆಯ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳ ಫಲಿತಾಂಶಗಳನ್ನೂ ಸಂಕ್ಷಿಪ್ತವಾಗಿ ನೀಡಲಾಗಿದೆ. ಮೂರನೆಯ ಅಧ್ಯಾಯ ಜಿಲ್ಲೆಯ ಜನಸಂಖ್ಯೆ, ಜನಸಾಂದ್ರತೆ, ವಿವಿಧ ಜನಾಂಗಕ್ಕೆ ಸೇರಿದ ಜನರ ಆಚಾರ-ವಿಚಾರ, ಆಹಾರ- ವಿಹಾರ, ಉಡುಗೆ-ತೊಡುಗೆ, ಭಾಷೆ-ಧರ್ಮ, ರೀತಿ-ನೀತಿ, ಸಂತೆ-ಜಾತ್ರೆ, ಮಠ-ಮಾನ್ಯ ಮುಂತಾದ ಹತ್ತು ಹಲವು ವಿಷಯಗಳ ಬಗ್ಗೆ ಮಹತ್ವದ ಮಾಹಿತಿಯನ್ನು ಒಳಗೊಂಡಿದ್ದರೆ, ನಾಲ್ಕನೆಯ ಅಧ್ಯಾಯ ಜಿಲ್ಲೆಯ ಕೃಷಿ ಮತ್ತು ನೀರಾವರಿ ವಿಷಯಗಳಿಗೆ ಪೂರಕವಾದ ಮಾಹಿತಿಯನ್ನು ನೀಡುವುದರ ಜೊತೆಗೆ, ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ಜಿಲ್ಲೆಗಾಗುವ ಪ್ರಯೋಜನಗಳನ್ನು ತಿಳಿಸುತ್ತದೆ. ಇತ್ತೀಚೆಗೆ ತೋಟಗಾರಿಕೆಗೆ ಹೆಸರಾಗಿರುವ ಜಿಲ್ಲೆಯು ನಿಂಬೆ, ದಾಳಿಂಬೆ, ದ್ರಾಕ್ಷಿ, ಚಿಕ್ಕು (ಸಪೋಟ) ಮುಂತಾದ ಹಣ್ಣುಗಳಿಗೆ ಪ್ರಸಿದ್ಧವಾಗಿದ್ದು, ಜಿಲ್ಲೆಯಲ್ಲಿ ತೋಟಗಾರಿಕೆಯ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಜಿಲ್ಲೆಯಲ್ಲಿ ಬೆಳೆಯುವ ದ್ರಾಕ್ಷಿ ಹಾಗೂ ದಾಳಿಂಬೆ ಹಣ್ಣುಗಳು ವಿದೇಶಗಳಿಗೆ ರಫ್ತಾಗುತ್ತಿರುವುದು ಗಮನಾರ್ಹವಾಗಿದೆ.

ಐದನೆಯ ಅಧ್ಯಾಯ ಜಿಲ್ಲೆಯ ಕೈಗಾರಿಕಾ ಸ್ಥಿತಿ-ಗತಿಗಳ ಬಗ್ಗೆ ವಿವರ ನೀಡುವುದರ ಜೊತೆಗೆ, ಜಿಲ್ಲೆಯಲ್ಲಿ ಕಲ್ಲಣಿ, ನೇಕಾರಿಕೆ, ಎಣ್ಣೆ ಉದ್ಯಮ, ಚಮ್ಮಾರಿಕೆಗಳೇ ಮುಂತಾದ ಕ್ಷೇತ್ರಗಳಲ್ಲಿಯ ಬೆಳವಣಿಗೆಯ ಬಗ್ಗೆ ಮಾಹಿತಿ ನೀಡಿದರೆ, ಆರನೆಯ ಅಧ್ಯಾಯ ಜಿಲ್ಲೆಯ ವಾಣಿಜ್ಯ, ವ್ಯಾಪಾರ, ಹಣಕಾಸು ವ್ಯವಹಾರ ಹಾಗೂ ಆರ್ಥಿಕ ರಂಗದಲ್ಲಿಯ ಸಹಕಾರಿ ಆಂದೋಲನಗಳ ವಿವಿಧ ಆಯಾಮಗಳ ಬಗ್ಗೆ ಮಹತ್ವದ ಅಂಶಗಳನ್ನು ನೀಡುತ್ತಿದ್ದು, ಈ ಅಧ್ಯಾಯವನ್ನು ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಎನ್. ಚಂದ್ರಶೇಖರಯ್ಯ ಅವರು ವೃತ್ತಿ ಸೇವಾ ಯೋಜನೆಯಡಿಯಲ್ಲಿ ಇಲಾಖೆಗಾಗಿ ಸಿದ್ಧಪಡಿಸಿಕೊಟ್ಟು ಸಹಕರಿಸಿದ್ದಾರೆ. ಏಳನೆಯ ಅಧ್ಯಾಯ ಜಿಲ್ಲೆಯಲ್ಲಿ ಲಭ್ಯವಿರುವ ಸಾರಿಗೆ ಸಂಪರ್ಕ ವ್ಯವಸ್ಥೆ, ಅಂಚೆ, ತಂತಿ, ದೂರವಾಣಿ, ಆಕಾಶವಾಣಿ, ದೂರದರ್ಶನ, ಪ್ರವಾಸೋದ್ಯಮ ಮುಂತಾದ ವಿಷಯಗಳನ್ನು ಒಳಗೊಂಡಿದ್ದರೆ, ಎಂಟನೆಯ ಅಧ್ಯಾಯ ಜಿಲ್ಲೆಯ ಆರ್ಥಿಕ ರಂಗದಲ್ಲಿ ಕಂಡು ಬರುವ ಏರಿಳಿತಗಳನ್ನು ಸೂಚಿಸುವ ಅಂಕಿ-ಅಂಶಗಳನ್ನೊಳಗೊಂಡ ಆರ್ಥಿಕ ಪ್ರವೃತ್ತಿಗಳನ್ನು ವಿವರಿಸುತ್ತದೆ. ಒಂಭತ್ತನೆಯ ಅಧ್ಯಾಯ ಜಿಲ್ಲೆಯ ಆಡಳಿತ ಹಾಗೂ ಕಂದಾಯ ಸಂಗ್ರಹಣೆಗಳೇ ಮುಂತಾದ ಆಡಳಿತಾತ್ಮಕ ಅಂಶಗಳನ್ನು ಚರ್ಚಿಸಿದರೆ, ಹತ್ತನೆಯ ಅಧ್ಯಾಯ ಜಿಲ್ಲೆಯ ಕಾನೂನು ಪಾಲನೆ, ಪೊಲೀಸ್ ವ್ಯವಸ್ಥೆ, ನ್ಯಾಯಾಲಯಗಳೇ ಮುಂತಾದ ವಿಷಯಗಳ ಬಗ್ಗೆ ತಿಳಿಸುತ್ತದೆ.

ಹನ್ನೊಂದನೆಯ ಅಧ್ಯಾಯ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಇಲಾಖೆಗಳನ್ನು ಪರಿಚಯಿಸಿದರೆ, ಹನ್ನೆರಡನೆಯ ಅಧ್ಯಾಯ ನಗರಪಾಲಿಕೆ, ಪುರಸಭೆ, ಪಟ್ಟಣ ಪಂಚಾಯತಿ, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಮುಂತಾದ ಸ್ಥಳೀಯ ಸ್ವಯಂ ಸೇವಾ ಆಡಳಿತ ಸಂಸ್ಥೆಗಳ ಬಗ್ಗೆ ತಿಳಿಸಲು ಯತ್ನಿಸುತ್ತದೆ. ಹದಿಮೂರನೆಯ ಅಧ್ಯಾಯ, ಜಿಲ್ಲೆಯು ಶಿಕ್ಷಣ ಹಾಗೂ ಕ್ರೀಡಾರಂಗಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಅಂಕಿ-ಅಂಶಗಳ ಮೂಲಕ ಮನದಟ್ಟು ಮಾಡಿಕೊಟ್ಟರೆ, ಹದಿನಾಲ್ಕನೆಯ ಅಧ್ಯಾಯ ಶಾಸನೋಕ್ತ ಕವಿಗಳನ್ನೂ ಒಳಗೊಂಡಂತೆ ಜಿಲ್ಲೆಯ ಸಮೃದ್ಧ ಸಾಹಿತ್ಯ ಪರಂಪರೆಯನ್ನು ಗುರುತಿಸುವುದರ ಜೊತೆಗೆ ವಾಸ್ತು, ಶಿಲ್ಪ, ಚಿತ್ರಕಲೆ, ಸಂಗೀತ ಮುಂತಾದ ವಿವಿಧ ಕಲಾ ಪ್ರಕಾರಗಳು, ಜಾನಪದ, ಪತ್ರಿಕೋದ್ಯಮ, ಸಿನಿಮಾ ಮುಂತಾದವು ಜಿಲ್ಲೆಯಲ್ಲಿ ಬೆಳೆದು ಬಂದಿರುವ ವೈಖರಿಯನ್ನು ತಿಳಿಸುತ್ತದೆ. ಹದಿನೈದನೆಯ ಅಧ್ಯಾಯ ಜಿಲ್ಲೆಯಲ್ಲಿ ಲಭ್ಯವಿರುವ ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ಸೇವಾ ಸೌಲಭ್ಯಗಳ ಬಗ್ಗೆ ಮಾಹಿತಿ ಒದಗಿಸಿದರೆ,

ಹದಿನಾರನೆಯ ಅಧ್ಯಾಯ ಜಿಲ್ಲೆಯಲ್ಲಿರುವ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ಲಭ್ಯವಿರುವ ಸಮಾಜ ಸೇವಾ ಸೌಲಭ್ಯಗಳೇ ಮುಂತಾದ ಅಂಶಗಳ ಬಗೆಗೆ ಮಾಹಿತಿ ನೀಡುತ್ತದೆ.

ಹದಿನೇಳನೆಯ ಅಧ್ಯಾಯದಲ್ಲಿ ಜಿಲ್ಲೆಯಲ್ಲಿರುವ ಪ್ರಾಕೃತಿಕ, ಚಾರಿತ್ರಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವದ ಪ್ರೇಕ್ಷಣೀಯ ಸ್ಥಳಗಳಿಗೆ ಸಂಬಂಧಿಸಿದಂತೆ ವಿಸ್ತೃತ ಕ್ಷೇತ್ರಕಾರ್ಯ ಕೈಗೊಂಡು ಆಯ್ದ ಸ್ಥಳಗಳನ್ನಿಲ್ಲಿ ಪರಿಚಯಿಸಲಾಗಿದೆ. ಸುಪ್ರಸಿದ್ಧ ಗುಹಾಲಯಗಳಿರುವ ಬಾದಾಮಿ, ಭಾರತೀಯ ವಾಸ್ತುಶಿಲ್ಪದ ತೊಟ್ಟಿಲೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಐಹೊಳೆ, ವಿಶ್ವ ಪರಂಪರೆ ಯೋಜನೆಯಡಿ ಸಂರಕ್ಷಣೆಗೆ ಒಳಪಟ್ಟಿರುವ ಪಟ್ಟದಕಲ್ಲು, ಪಿಸುಮಾತಿನ ಮೊಗಸಾಲೆಯನ್ನುಳ್ಳ ವಿಶ್ವ ವಿಖ್ಯಾತ ಗೋಳಗುಮ್ಮಟ, ಇಬ್ರಾಹಿಂ ರೋಜಾ, ಜಾಮಿಯಾ ಮಸೀದಿ ಮುಂತಾದ ಮುಸ್ಲಿಂ ಸ್ಮಾರಕಗಳೊಂದಿಗೆ ಪ್ರಾಚೀನ ಇಗರ್ಜಿಯೂ ಇರುವ ವಿಜಾಪುರಗಳಂತಹ ಪ್ರಮುಖ ವಾಸ್ತುಶಿಲ್ಪ ಕಲಾ ಕೇಂದ್ರಗಳಷ್ಟೇ ಅಲ್ಲದೆ ಬಿ.ಎನ್. ಜಾಲಿಹಾಳ, ಚಟ್ಟರಕಿ, ನಿಂಬಾಳ, ಬೇವೂರು, ಹಳ್ಳೂರು, ಮುತ್ತಗಿ, ಕಡಲೇವಾಡ, ಮಲಘಾಣ, ಬೆಳಗಲಿ, ನಿಂಬಾಳ, ತೇರದಾಳ, ಹೊರ್ತಿ, ಶಿರೂರು, ಅರಸಿಬೀದಿ, ಮುಧೋಳ, ಯರಗಲ್ಲು, ಇಂಗಳೇಶ್ವರ ಮುಂತಾದ ಇನ್ನೂ ಹಲವಾರು ಸ್ಥಳಗಳು ಜಿಲ್ಲೆಯಲ್ಲಿವೆ. ಕೋಟಿಕಲ್ ಜಲಪಾತ, ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳು ವಿಹಾರ ಯೋಗ್ಯ ಸ್ಥಳಗಳಾದರೆ, ಪೌರಾಣಿಕ ಮಹತ್ವದ ಮಹಾಕೂಟ, ಬನಶಂಕರಿ, ಬಸವಣ್ಣನ ಬಾಗೇವಾಡಿ, ಬಸವ ಐಕ್ಯಸ್ಥಳ ಕೂಡಲಸಂಗಮ, ನೇಮಿನಾಥ ಬಸದಿ ಇರುವ ತೇರದಾಳ ಮತ್ತು ಬಾಬಾ ನಗರ, ಮಹಿಪತಿದಾಸರ ಬೃಂದಾವನವಿರುವ ಕಾಖಂಡಕಿ, ನರಸಿಂಹ ಗುಡಿ ಇರುವ ತೊರವೆ, ಇಂಚಗೇರಿ ಮಠ, ನಿಂಬಾಳದ ರಾನಡೆ ಆಶ್ರಮ,ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ತಾಳೀಕೋಟೆ, ತಿಕೋಟಾ, ಇಂಡಿ, ನಾಲತವಾಡ ಮುಂತಾದವು ಧಾರ್ಮಿಕರ ಪ್ರಮುಖ ಯಾತ್ರಾಸ್ಥಳಗಳಾಗಿ ಗಮನ ಸೆಳೆಯುತ್ತವೆ.

ಇತ್ತೀಚೆಗೆ ಜರುಗಿದ ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಹೋರಾಡುತ್ತ ಮಡಿದ ನಾಲ್ವರು ಹಾಗೂ ನಂತರದಲ್ಲಿ ಜರುಗಿದ ಗಡಿ ಘರ್ಷಣೆಯಲ್ಲಿ ಗತಿಸಿದ ಇನ್ನೋರ್ವ ವೀರಯೋಧರನ್ನೂ ನೀಡಿದ ಶ್ರೇಯಸ್ಸು ಈ ಜಿಲ್ಲೆಯದಾಗಿದ್ದು, ಅದನ್ನಿಲ್ಲಿ ದಾಖಲಿಸುವುದರ ಮೂಲಕ ಅವರ ಸೇವೆಯನ್ನು ಸ್ಮರಿಸಲಾಗಿದೆ. ಹೀಗೆ ವೈವಿಧ್ಯತೆಯಿಂದ ಕೂಡಿರುವ ಜಿಲ್ಲೆಯ ವಿಶಿಷ್ಟ ಅಂಶಗಳನ್ನು ೨೫೦ ಕ್ಕೂ ಹೆಚ್ಚು ಕಪ್ಪುಬಿಳುಪು ಹಾಗೂ ವರ್ಣ ಛಾಯಾಚಿತ್ರಗಳ ಮೂಲಕ ಬಿಂಬಿಸಲು ಯತ್ನಿಸಲಾಗಿದೆ. ಜಿಲ್ಲೆಯ ಗ್ರಾಮ ಹಾಗೂ ನಗರಪ್ರದೇಶಗಳ ಪಟ್ಟಿಯನ್ನು ಒಳಗೊಂಡಿರುವ ಈ ಗ್ರಂಥದಲ್ಲಿ ಜಿಲ್ಲೆಯ ಭೌಗೋಳಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಸೂಚಿಸುವ ಜಿಲ್ಲಾ ನಕಾಶೆಯನ್ನೂ ಒದಗಿಸಲಾಗಿದೆ. ಎಲ್ಲಕ್ಕೂ ಮಿಗಿಲಾಗಿ ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಗ್ರಂಥಾಂತ್ಯ ಭಾಗದಲ್ಲಿ ಆಯ್ದ ಆಕರ ಗ್ರಂಥಗಳ ಪಟ್ಟಿ ಹಾಗೂ ಶಬ್ದಸೂಚಿಯನ್ನೂ ನೀಡಲಾಗಿದೆ.

ಈ ಗ್ರಂಥದ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಖಾತೆಯ ಹಿಂದಿನ ಸಂಪುಟ ಸಚಿವೆಯರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಹಾಗೂ ಇಂದಿನ ರಾಜ್ಯ ಸಚಿವೆಯರಾದ ಶ್ರೀಮತಿ ರಾಣಿ ಸತೀಶ್ ಅವರು, ಸರ್ಕಾರದ ಮುಖ್ಯಕಾರ್ಯದರ್ಶಿಗಳಾದ ಶ್ರೀ. ಬಿ.ಕೆ.ಭಟ್ಟಾಚಾರ್ಯ, ಐ.ಎ.ಎಸ್., ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಅ.ರಾ. ಚಂದ್ರಹಾಸಗುಪ್ತ, ಐ.ಎ.ಎಸ್., ಅವರು ವಿಶೇಷ ಸಹಕಾರ ನೀಡಿದ್ದು, ಅವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ಈ ಜಿಲ್ಲಾ ಗ್ಯಾಸೆಟಿಯರಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಪುನರ್ವಸತಿ ಆಯುಕ್ತರಾದ ಎಸ್.ಎಂ. ಜಾಮ್‌ದಾರ್,ಐ.ಎ.ಎಸ್., ವಿಜಾಪುರ ಜಿಲ್ಲಾಧಿಕಾರಿಗಳಾದ ಅರವಿಂದ್ ಜನ್ನು, ಐ.ಎ.ಎಸ್., ಬಾಗಲಕೋಟೆ ಜಿಲ್ಲಾಧಿಕಾರಿಗಳಾದ ಶಂಭುದಯಾಳ್ ಮೀನಾ, ಐ.ಎ.ಎಸ್., ಹಾಗೂ ಜಿಲ್ಲೆಯಲ್ಲಿರುವ ವಿವಿಧ ಇಲಾಖಾ ಮುಖ್ಯಾಧಿಕಾರಿಗಳು ಅಗತ್ಯ ಮಾಹಿತಿಯನ್ನು ಒದಗಿಸಿ ಸಹಕರಿಸಿದ್ದಾರೆ. ಈ ಸಂಪುಟವನ್ನು ಹೊರತರುವಲ್ಲಿ ಗ್ಯಾಸೆಟಿಯರ್ ಸಲಹಾ ಸಮಿತಿಯ ಸದಸ್ಯರಾದ ಇತಿಹಾಸಜ್ಞ ಡಾ. ಅ. ಸುಂದರ, ವಿಜಾಪುರ ಜಿಲ್ಲಾ ಗ್ಯಾಸೆಟಿಯರಿಗಾಗಿ ಸಲಹಾ ಸಮಿತಿಯ ವಿಶೇಷ ಸದಸ್ಯರಾಗಿದ್ದ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ಹಾಗೂ ಡಾ. ಎಸ್.ಕೆ. ಕೊಪ್ಪ ಅವರು ವಿಶೇಷ ಆಸ್ಥೆ ವಹಿಸಿ, ಇತಿಹಾಸ, ಸಂಸ್ಕೃತಿ ಮತ್ತು ಸಾಹಿತ್ಯ ಹಾಗೂ ಪ್ರೇಕ್ಷಣೀಯ ಸ್ಥಳಗಳು ಅಧ್ಯಾಯಗಳನ್ನು ಪರಿಶೀಲಿಸಿ ಪರಿಷ್ಕರಿಸಿ ಪುನರ್ರಚಿಸುವಲ್ಲಿ ಸಹಕರಿಸಿದ್ದು, ಸಲಹಾ ಸಮಿತಿಯ ಇತರ ಸದಸ್ಯರುಗಳಾದ ರೆ॥ ಡಾ. ಸಿ.ಜೆ. ಸಾಲ್ಡಾನಾ, ಡಾ. ಎಂ.ಎಂ. ಕಲಬುರ್ಗಿ, ಡಾ. ಸೂರ್ಯನಾಥ ಕಾಮತ್, ಡಾ. ಕಮಲಾ ಹಂಪನಾ, ಪ್ರೊ. ಲಕ್ಷ್ಮಣ್ ತೆಲಗಾವಿ, ಶ್ರೀ ಎನ್.ಡಿ. ಬಗರಿ ಮತ್ತು ಶ್ರೀ ಎಂ.ಬಿ. ಪಾಟೀಲ್ ಅವರೂ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆಗಳು.

ಈ ಗ್ರಂಥದ ಪ್ರಕಟಣೆಯಲ್ಲಿ ಶ್ರೀಯುತರುಗಳಾದ ಬಾದಾಮಿಯ ಡಾ. ಶೀಲಾಕಾಂತ ಪತ್ತಾರ್, ಮಧ್ವರಾವ್ ಹ ಕೌಜಲಗಿ, ಎನ್.ಕೆ. ಉಪಾಧ್ಯಾಯ, ಪೊಲೀಸ್ ಅಧಿಕಾರಿಗಳಾದ ಶಂಕರ ಬಿದರಿ, ಸಾರವಾಡದ ವಾಲಿ ಕುಟುಂಬ, ಯರಗಲ್ಲಿನ ಕಲಬುರ್ಗಿ ಕುಟುಂಬ, ಚಡಚಣದ ಶ್ರೀ ರಾಜೀವ್ ಎನ್ ಸಿಂಪಿ., ಜಮಖಂಡಿಯ ಕೇಶವ ಉಮರ್ಜಿ, ಬಾಗಲಕೋಟೆಯ ಸೋಮಶೇಖರ ಸಾಲಿ, ವಿ.ಜಿ. ನಿಟ್ಟೂರೆ, ವಿ.ಆರ್. ನಾಗರಹಳ್ಳಿ (ವಿಜಾಪುರ), ಜಿ.ಎಸ್. ದೇಶಪಾಂಡೆ, ಎಸ್.ಆರ್. ಭಿಡೆ, ಕರಿಶಂಕರಿ, ಧ್ರುವರಾಜ ದೇಶಪಾಂಡೆ, ಸಿ.ಸು. ಸಂಗಮೇಶ, ಶಂ.ಗು. ಬಿರಾದಾರ್, ಈಶ್ವರಚಂದ್ರ ಚಿಂತಾಮಣಿ, ರಂಜಾನ್ ದರ್ಗಾ, ಎಸ್ .ಆರ್. ರೊಹಿಡೇಕರ್, ದು.ನಿಂ. ಬೆಳಗಲಿ, ಗುಂಡಪ್ಪ ಮಾಯಾಚಾರ್, ಶ್ರೀಧರ ಛತ್ರೆ, ವಿ.ಬಿ. ನಾಯಕ್, ಸಿ.ಬಿ. ಕಾಚಾಪುರ, ವಿಜಯ ಸಿಂಧೂರ, ಮಲ್ಲೇಶಪ್ಪ ಪತ್ತಾರ್, ಆರ್.ಎಚ್. ಮೋರೆ, ಶಂಕರ ಕಟಗಿ ಮುಂತಾದವರು ಮಾಹಿತಿ ನೀಡಿ ಸಹಕರಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳು. ಜಿಲ್ಲಾ ಗ್ಯಾಸೆಟಿಯರಿಗೆ ಪೂರಕವಾದ ಛಾಯಾಚಿತ್ರಗಳನ್ನು ಭಾರತೀಯ ಪುರಾತತ್ವ ಇಲಾಖೆ, ಧಾರವಾಡ, ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಡಾ. ಕೃಷ್ಣಾ ಕೊಲ್ಹಾರ ಕುಲಕರ್ಣಿ, ಡಾ.ಎಸ್.ಕೆ. ಕೊಪ್ಪ, ಡಾ. ಎಚ್. ಚಂದ್ರಶೇಖರ್, ಡಾ.ಕೆ. ಚಂದ್ರಪಾಲ್ ಸಿಂಗ್, ಡಾ. ಅ.ಲ. ನರಸಿಂಹನ್ ಹಾಗೂ ಎಸ್. ರಾಜೇಂದ್ರಪ್ಪ ಒದಗಿಸಿದ್ದಾರೆ. ಈ ಗ್ರಂಥಕ್ಕೆ ಪೂರಕವಾಗಿ ಜಿಲ್ಲಾ ನಕಾಶೆಯನ್ನು ಒದಗಿಸಿಕೊಟ್ಟಿರುವ ಭೂ ಸರ್ವೇಕ್ಷಣ ಹಾಗೂ ಕಂದಾಯ ಇಲಾಖೆಯ ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದ ಗುಡ್ಡಪ್ಪ ಎಸ್. ಈಬ್ಬಕ್ಕನವರ್, ಪುಂಡಲೀಕ ಡಿ. ಜೋಗ್ದನ್‌ಕರ್ ಹಾಗೂ ಎಚ್.ಕೆ. ನಾಗೇಂದ್ರ ಕುಮಾರ್ ಮುಂತಾದವರಿಗೆ ಇಲಾಖೆಯು ಆಭಾರಿಯಾಗಿದೆ. ಈ ಗ್ರಂಥದ ಸಂಪಾದನಾ ಕಾರ್ಯದಲ್ಲಿ ಇಲಾಖೆಯ ಸಂಪಾದಕರು, ಅನ್ವೇಷಕರು ಹಾಗೂ ಸಿಬ್ಬಂದಿ ವರ್ಗದವರೂ ಪೂರ್ಣ ಸಹಕಾರ ನೀಡಿದ್ದಾರೆ. ಈ ಗ್ರಂಥವನ್ನು ಹೊರತರುವಲ್ಲಿ ಕೈಜೋಡಿಸಿರುವ ಅಭಿಮಾನಿ ಮುದ್ರಣಾಲಯದ ವ್ಯವಸ್ಥಾಪಕರಾದ ಶ್ರೀ ಟಿ. ವೆಂಕಟೇಶ್ ಹಾಗೂ ಸಿಬ್ಬಂದಿ ವರ್ಗದವರೆಲ್ಲರಿಗೆ; ಮುದ್ರಣ ಹಂತದಲ್ಲಿ ವಿಶೇಷ ಆಸಕ್ತಿ ವಹಿಸಿ ಗ್ರಂಥ ಪ್ರಕಟಣೆಯಲ್ಲಿ ಸಹಕರಿಸಿರುವ ನಮ್ಮ ಇಲಾಖೆಯವರಾದ ಎಸ್.ಎ. ಜಗನ್ನಾಥ, ಎಸ್. ರಾಜೇಂದ್ರಪ್ಪ, ಎಸ್.ಎನ್. ರಾಜು, ಆರ್.ಜಿ. ಕುಲಕರ್ಣಿ, ಡಾ.ಅ.ಲ. ನರಸಿಂಹನ್ ಮುಂತಾದವರೆಲ್ಲರಿಗೂ ಕೃತಜ್ಞತೆಗಳು.

ಈ ಗ್ರಂಥದ ಪ್ರಕಟಣಾ ಕಾರ್ಯವು ಅನಿವಾರ್ಯ ತಾಂತ್ರಿಕ ಅಡಚಣೆಗಳಿಂದಾಗಿ ತಡವಾಗಿದೆ. ಈ ಗ್ರಂಥವು ಮೌಲಿಕ ಮಾಹಿತಿಗಳ ಆಗರವಾಗಿದ್ದು ವಿವಿಧ ಇಲಾಖೆಗಳಿಗೆ, ಸಂಶೋಧಕರಿಗೆ, ವಿಷಯಾಸಕ್ತರಿಗೆ ಹಾಗೂ ಜನಸಾಮಾನ್ಯರಿಗೆ ಸಾಕಷ್ಟು ಮಾಹಿತಿ ಒದಗಿಸುತ್ತದೆಂಬ ಭರವಸೆ ನಮ್ಮದು. ಮುಖ್ಯ ಕಾರ್ಯದರ್ಶಿಗಳ ಸೂಚನೆಯಂತೆ ನಾಡಿನ ಶ್ರೀಮಂತ ಇತಿಹಾಸ, ಕಲೆ, ಸಂಸ್ಕೃತಿ ಮುಂತಾದವುಗಳನ್ನು ವಿಶ್ವಕ್ಕೆ ಪರಿಚಯಿಸುವ ದೃಷ್ಟಿಯಿಂದ ಪರಿಷ್ಕೃತ ಕನ್ನಡ ಜಿಲ್ಲಾ ಗ್ಯಾಸೆಟಿಯರುಗಳ ಆಂಗ್ಲ ಆವೃತ್ತಿಯನ್ನೂ ಹೊರತರುವ ಯೋಜನೆಯನ್ನು ಹೊಂದಿರುವ ಇಲಾಖೆಯು, ಪ್ರಸ್ತುತ ಮಂಡ್ಯ ಹಾಗೂ ಕೋಲಾರ ಜಿಲ್ಲಾ ಗ್ಯಾಸೆಟಿಯರುಗಳ ಪರಿಷ್ಕರಣ ಕಾರ್ಯದಲ್ಲಿ ತೊಡಗಿದೆಯೆಂದು ತಿಳಿಸುತ್ತಾ, ಈ ಗ್ರಂಥದ ಪ್ರಕಟಣೆಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನೆರವು ನೀಡಿರುವ ಎಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು
ದಿನಾಂಕ: ೧೨.೧೧.೧೯೯೯

ಡಾ.ಆರ್. ಮುನಿಸ್ವಾಮಿ
ಮುಖ್ಯ ಸಂಪಾದಕರು

# ವಿಜಾಪುರ ಜಿಲ್ಲಾ ಗ್ಯಾಸೆಟಿಯರ್

## ಪರಿವಿಡಿ


| | |
|---|---|
| ಮುನ್ನುಡಿ | V |
| ಪರಿವಿಡಿ | IX |
| ಸಲಹಾ ಸಮಿತಿ ಪಟ್ಟಿ | XV |
| ಇಲಾಖೆಯ ಸಿಬ್ಬಂದಿ ವರ್ಗ | XVI |
| ಛಾಯಾಚಿತ್ರಗಳು | |

**ಅಧ್ಯಾಯ ೧** **ಪ್ರಾಸ್ತಾವಿಕ** ೧ ರಿಂದ ೪೨

ಹೆಸರಿನ ಮೂಲ (೧) ವಿಸ್ತೀರ್ಣ ಮತ್ತು ಜನಸಂಖ್ಯೆ (೨) ಪ್ರಾದೇಶಿಕ ಬದಲಾವಣೆಗಳು (೯) ಭೂ ವಿಜ್ಞಾನ (೧೪) ಖನಿಜ ಸಂಪತ್ತು(೧೭) ಜಲಸಂಪತ್ತು (೨೧) ಅಂತರ್ಜಲ ಸಂಪನ್ಮೂಲ ಮತ್ತು ಬಳಕೆ (೨೬) ಹವಾಮಾನ (೩೦) ಸಸ್ಯ ಸಂಪತ್ತು (೩೯) ಪ್ರಾಣಿ ಸಂಪತ್ತು (೪೧)

**ಸಂ: ಎಸ್.ಎನ್. ರಾಜು**

**ಅಧ್ಯಾಯ ೨** **ಇತಿಹಾಸ** ೪೩ ರಿಂದ ೨೨೭

ಪ್ರಸ್ತಾವನೆ (೪೩ ) ಆಧಾರಗಳು (೪೫) ಪೌರಾಣಿಕ ಹಿನ್ನೆಲೆ (೪೭) ಇತಿಹಾಸ ಪೂರ್ವ ಕಾಲ (೫೦) ಆದಿ ಹಳೇ ಶಿಲಾಯುಗ ಸಂಸ್ಕೃತಿ (೫೧) ಮಧ್ಯ ಹಳೆ ಶಿಲಾಯುಗ ಸಂಸ್ಕೃತಿ (೫೩) ಅಂತ್ಯ ಹಳೆ ಶಿಲಾಯುಗ ಸಂಸ್ಕೃತಿ (೫೪) ಸೂಕ್ಷ್ಮ ಶಿಲಾಯುಗ ಸಂಸ್ಕೃತಿ(೫೫) ನೂತನ ಶಿಲಾಯುಗ ಸಂಸ್ಕೃತಿ (೫೭) ತಾಮ್ರ ಶಿಲಾಯುಗ ಸಂಸ್ಕೃತಿ (೫೮) ಬೂದಿ ದಿಬ್ಬಗಳು (೫೯) ಬೃಹತ್ ಶಿಲಾಯುಗ ಸಂಸ್ಕೃತಿ (೬೦) ಇತಿಹಾಸ ಪೂರ್ವಕಾಲದ ಚಿತ್ರಕಲೆ (೬೩) ಇತಿಹಾಸ ಕಾಲ-ಮೌರ್ಯರು (೬೪) ಶಾತವಾಹನರು (೬೫) ಕದಂಬರು (೬೬) ಬಾದಾಮಿ ಚಾಳುಕ್ಯರು (೬೭) ರಾಷ್ಟ್ರಕೂಟರು (೮೨) ಕಲ್ಯಾಣದ ಚಾಳುಕ್ಯರು (೮೪) ಕಳಚೂರಿಗಳು (೯೯)ದೇವಗಿರಿಯ ಸೇಉಣರು (೧೦೭) ವಿಜಯನಗರ ಸಾಮ್ರಾಜ್ಯ (೧೧೮) ಬಹಮನಿ ಸಾಮ್ರಾಜ್ಯ (೧೨೧) ವಿಜಾಪುರದ ಆದಿಲ್‌ಷಾಹಿ ಸಾಮ್ರಾಜ್ಯ (೧೨೪) ಮೊಗಲರ ಆಡಳಿತ (೧೬೦), ಹೈದರಾಬಾದ್ ನಿಜಾಮರು (೧೬೧) ಹೈದರಾಲಿ-ಟಿಪ್ಪುಸುಲ್ತಾನ್ (೧೬೨) ಮರಾಠರು (೧೬೩), ಪ್ರಾದೇಶಿಕ ಸಂಸ್ಥಾನಗಳು-ಮುಧೋಳ ಸಂಸ್ಥಾನ (೧೬೫) ಜಮಖಂಡಿ ಸಂಸ್ಥಾನ (೧೬೬) ಸವಣೂರು ನವಾಬರು (೧೬೯), ಸಾಂಗಲಿ-ಹಿರೆಕುರಂದವಾಡ ಸಂಸ್ಥಾನ (೧೭೦) ಬ್ರಿಟಿಷರ ಆಡಳಿತ (೧೭೦), ಬ್ರಿಟಿಷ್ ವಿರೋಧಿ ಬಂಡಾಯಗಳು-ಸಿಂದಗಿ ಬಂಡಾಯ (೧೭೨), ಬಾದಾಮಿ ಬಂಡಾಯ (೧೭೩), ೧೮೫೭ರ ಬಂಡಾಯಗಳು-ಚಾಂದಕವಾಟೆ ಬಂಡಾಯ (೧೭೩) ಹಲಗಲಿ ಬಂಡಾಯ (೧೭೪) ಜಮಖಂಡಿ ಬಂಡಾಯ (೧೭೪) ಸ್ವಾತಂತ್ರ್ಯ ಸಂಗ್ರಾಮ: ಹಿನ್ನೆಲೆ (೧೭೪), ಸ್ವದೇಶಿ ಚಳವಳಿ (೧೭೮) ಅಸಹಕಾರ ಚಳವಳಿ (೧೮೪) ಉಪ್ಪಿನ ಸತ್ಯಾಗ್ರಹ (೧೯೫) ಅರಣ್ಯ ಸತ್ಯಾಗ್ರಹ (೧೯೮) ವೈಯಕ್ತಿಕ ಸತ್ಯಾಗ್ರಹ (೨೦೩) ಚಲೇಜಾವ್ ಚಳವಳಿ (೨೦೬) ಏಕೀಕರಣ ಚಳವಳಿ (೨೧೨) ಚುನಾವಣೆಗಳು (೨೧೫) ಮತ್ತು (೧೧೭೦).

**ಸಂ : ಎಸ್. ರಾಜೇಂದ್ರಪ್ಪ**

**ಅಧ್ಯಾಯ ೩ — ಜನತೆ — ೨೨೮ ರಿಂದ ೩೦೨**

ಜನಸಂಖ್ಯಾ ಬೆಳವಣಿಗೆ (೨೨೮) ಜನಸಾಂದ್ರತೆ (೨೩೧), ವಾಸದ ಮನೆಗಳು ಮತ್ತು ಕುಟುಂಬಗಳು (೨೩೧), ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ (೨೩೪), ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ (೨೩೫), ವಲಸೆ (೨೩೭), ಸ್ತ್ರೀ ಪುರುಷರ ಪ್ರಮಾಣ (೨೩೮), ವಯೋಮಾನದಂತೆ ವಿಂಗಡಣೆ (೨೩೯) ವಯೋಗುಂಪು ಮತ್ತು ವೈವಾಹಿಕ ಸ್ಥಾನಮಾನ (೨೪೦ ), ಗ್ರಾಮೀಣ ಜನತೆ (೨೪೩), ಪಟ್ಟಣಗಳ ಜನಸಂಖ್ಯೆ ಹಾಗೂ ಬೆಳವಣಿಗೆ (೨೪೪) ಪರಿಶಿಷ್ಟ ಜಾತಿ (೨೪೬) ಪರಿಶಿಷ್ಟ ವರ್ಗ (೨೪೮), ಅಂಗವಿಕಲರು (೨೫೦), ಸಾಕ್ಷರತೆ(೨೫೧) ಭಾಷೆಗಳು (೨೫೧), ಧರ್ಮಗಳು (೨೫೨) ಮತಗಳು ಹಾಗೂ ಇತರ ಧಾರ್ಮಿಕ ಸಂಸ್ಥೆಗಳು (೨೫೬) ಜಾತಿ ಮತ್ತು ಬುಡಕಟ್ಟುಗಳು (೨೬೫) ಸಾಮಾಜಿಕ ಜೀವನ (೨೭೮), ಹಬ್ಬಗಳು(೨೮೯) ಜಾತ್ರೆಗಳು (೨೯೪) ಶೌರ್ಯ ಪರಂಪರೆ (೩೦೨)

ಸಂ : ಎಸ್.ಆರ್. ಮೈಲಾರಯ್ಯ

**ಅಧ್ಯಾಯ ೪ — ಕೃಷಿ ಮತ್ತು ನೀರಾವರಿ — ೩೦೩ ರಿಂದ ೩೭೯**

ಕೃಷಿ ಕೆಲಸಗಾರರು (೩೦೩) ಭೂಮಿಯ ಬಳಕೆ (೩೦೩) ಕೃಷಿ ಸಂಶೋಧನಾ ಕೇಂದ್ರ (೩೦೭) ಮಣ್ಣುಗಳು (೩೧೨)ಕೃಷಿ ಭೂ ಹಿಡುವಳಿಗಳು (೩೧೫) ಕೃಷಿ ಬೆಳೆ ಪದ್ಧತಿ (೩೧೭) ಭತ್ತ(೩೨೦) ಜೋಳ (೩೩೦) ಮುಸುಕಿನ ಜೋಳ (೩೩೧) ಗೋಧಿ (೩೩೨) ಹತ್ತಿ(೩೩೨) ಸಜ್ಜೆ (೩೩೩) ಶೇಂಗಾ (೩೩೩) ಕುಸುಬೆ (೩೩೫) ಸೂರ್ಯಕಾಂತಿ (೩೩೬) ಕಬ್ಬು(೩೩೭) ಸಸ್ಯ ಸಂರಕ್ಷಣೆ (೩೩೮) ಸುಧಾರಿತ ಕೃಷಿ ಉಪಕರಣಗಳು (೩೩೮) ಕೃಷಿ ಯಂತ್ರೋಪಕರಣಗಳು (೩೪೦) ಕೃಷಿ ವಿಸ್ತರಣಾ ಯೋಜನೆ (೩೪೧) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ(೩೪೧) ನೀರಿನ ನಿರ್ವಹಣೆ(೩೪೨) ಕೃಷಿ ಅರಣ್ಯ (೩೪೩) ಇಲಿಗಳ ನಿಯಂತ್ರಣ (೩೪೫ ) ಉಗ್ರಾಣದ ಕೀಟಗಳ ನಿಯಂತ್ರಣ (೩೪೫) ಗೆದ್ದಲಿನ ನಿಯಂತ್ರಣ (೩೪೬) ನೀರಾವರಿ (೩೪೮) ಕೃಷ್ಣಾ ಮೇಲ್ದಂಡೆ ಯೋಜನೆ (೩೫೨) ಬಚಾವತ್ ಆಯೋಗ (೩೫೭) ತೋಟಗಾರಿಕೆ (೩೬೬) ಬಾಳೆ (೩೬೯)ಮಾವು (೩೬೯) ದಾಳಿಂಬೆ (೨೭೦) ಮೋಸಂಬಿ ಮತ್ತು ಕಿತ್ತಳೆ (೩೭೧) ಟೊಮ್ಯಾಟೋ (೩೭೨) ಬದನೆ (೩೭೨) ಉಳ್ಳಾಗಡ್ಡಿ (೩೭೩) ಪಶುಸಂಗೋಪನೆ (೩೭೩) ಮೀನುಗಾರಿಕೆ (೩೭೯)

ಸಂ : ಎಸ್.ಎನ್. ರಾಜು

**ಅಧ್ಯಾಯ ೫ — ಕೈಗಾರಿಕೆಗಳು — ೩೮೦ ರಿಂದ ೪೮೮**

ಪ್ರಾಸ್ತಾವಿಕ (೩೮೦) ಪ್ರಾಕೃತಿಕ ಸಂಪನ್ಮೂಲ (೩೮೨) ಪ್ರಾಚೀನ ಕೈಗಾರಿಕೆಗಳು (೩೮೩) ಬೃಹತ್ ಹಾಗೂ ಮಧ್ಯಮ ಕೈಗಾರಿಕೆ (೩೮೫) ಸಕ್ಕರೆ (೩೯೦) ಗಣಿ ಕೈಗಾರಿಕೆ (೩೯೩) ಹತ್ತಿ ಉದ್ಯಮ (೩೯೭) ಕಾರ್ಮಿಕ ಕಲ್ಯಾಣ (೪೦೨) ನೇಕಾರಿಕೆ (೪೦೩) ಉಣ್ಣೆ ನೇಕಾರಿಕೆ (೪೨೨), ಜಮಖಾನ ಉದ್ಯಮ (೪೨೫) ಖಾದಿ ಮತ್ತು ಗ್ರಾಮೋದ್ಯೋಗ (೪೨೬) ರೇಷ್ಮೆ ಉದ್ದಿಮೆ (೪೩೨) ಸಣ್ಣ ಕೈಗಾರಿಕೆಗಳು (೪೩೭) ಕರಕುಶಲ ಕೈಗಾರಿಕೆ (೪೪೮) ಚರ್ಮೋದ್ಯಮ (೪೫೨) ವಿಶ್ವ ಕಾರ್ಯಕ್ರಮ (೪೫೩) ಹೊಟೇಲ್ ಉದ್ಯಮ (೪೬೧) ವಿದ್ಯುಚ್ಛಕ್ತಿ ಹಾಗೂ ವಿದ್ಯುತ್ ಉತ್ಪಾದನೆ (೪೬೫) ಜೈವಿಕ ಅನಿಲ ಮತ್ತು ಅಸ್ತ್ರ ಒಲೆಗಳು (೪೭೩) ಮುದ್ರಣಾಲಯ(೪೭೭) ಬೀಡಿ ಉದ್ಯಮ(೪೭೮) ಗಾಣದ ಎಣ್ಣೆ (೪೭೮) ಹಗ್ಗ ತಯಾರಿಕೆ (೪೮೦) ಕುಂಬಾರಿಕೆ (೪೮೦), ತರಬೇತಿ ಸಂಸ್ಥೆಗಳು(೪೮೧), ಔಷಧ ಘಟಕ (೪೮೨) ಡೆಂಪೋ ಡೈರಿ ಕೈಗಾರಿಕೆ (೪೮೨) ಕೈಗಾರಿಕಾ ಕೇಂದ್ರಗಳು (೪೮೩) ಕೈಗಾರಿಕಾ ಅಭಿವೃದ್ಧಿಯ ಸಾಧ್ಯತೆಗಳು(೪೮೬)

ಸಂ : ಕೆ.ಆರ್. ಕಮಲೇಶ್

**ಅಧ್ಯಾಯ ೬ — ಬ್ಯಾಂಕಿಂಗ್ ಮತ್ತು ಹಣಕಾಸು — ೪೮೯ ರಿಂದ ೫೬೨**

ಜಿಲ್ಲೆಯ ಬ್ಯಾಂಕಿಂಗ್ ಉದ್ಯಮದ ಇತಿಹಾಸ (೪೮೬) ಆಧುನಿಕ ಬ್ಯಾಂಕಿಂಗ್ ಮತ್ತು ಹಣಕಾಸು (೪೮೯) ಮಾರ್ಗದರ್ಶಿ ಯೋಜನೆ(೫೦೪) ಗ್ರಾಮೀಣ ಬ್ಯಾಂಕುಗಳು (೫೧೦) ವಿಮಾ ವ್ಯವಹಾರ (೫೧೨) ಸಹಕಾರಿ ಚಳವಳಿ (೫೧೮) ವ್ಯಾಪಾರ ಮತ್ತು ವಾಣಿಜ್ಯ (೫೩೫) ನಿಯಂತ್ರಿತ ಮಾರುಕಟ್ಟೆಗಳು (೫೪೪) ಸಂತೆಗಳು (೫೫೩) ಉಗ್ರಾಣ ವ್ಯವಸ್ಥೆ (೫೫೬) ಅಳತೆ ಮಾಪುಗಳು (೫೫೯)

ಲೇಖಕರು: ಪ್ರೊ. ಎನ್. ಚಂದ್ರಶೇಖರಯ್ಯ

ಸಂ : ಜಿ. ಭಾನುದಾಸ್

**ಅಧ್ಯಾಯ ೭ — ಸಾರಿಗೆ ಮತ್ತು ಸಂಪರ್ಕ — ೫೬೩ ರಿಂದ ೬೦೨**

ಪ್ರಸ್ತಾವನೆ (೫೬೩) ಭೂ ಸಾರಿಗೆ- ರಸ್ತೆಗಳು (೫೬೫) ರಾಷ್ಟ್ರೀಯ ಹೆದ್ದಾರಿ (೫೬೭) ರಾಜ್ಯ ಹೆದ್ದಾರಿಗಳು (೫೬೮) ಜಿಲ್ಲಾ ಮುಖ್ಯ ರಸ್ತೆಗಳು (೫೭೧) ಇತರ ಜಿಲ್ಲಾ ರಸ್ತೆಗಳು (೫೭೧) ಗ್ರಾಮಾಂತರ ರಸ್ತೆಗಳು (೫೭೨) ಸೇತುವೆಗಳು (೫೭೭) ಸಂಚಾರ ಗಣತಿ ಹಾಗೂ ವಾಹನ ಸಮೀಕ್ಷೆ (೫೮೦) ಪ್ರಾದೇಶಿಕ ಸಾರಿಗೆ ಕಚೇರಿಗಳು (೫೮೦) ಸಾರ್ವಜನಿಕ ಸಂಚಾರ (೫೮೫) ರೈಲು ಸಾರಿಗೆ (೫೮೮) ಜಲ ಸಾರಿಗೆ (೫೯೧) ವಾಯು ಸಾರಿಗೆ (೫೯೩) ಅಂಚೆ ಸೌಕರ್ಯ (೫೯೩) ತಂತಿ ಕಚೇರಿ (೫೯೮) ದೂರವಾಣಿ (೫೯೮), ಆಕಾಶವಾಣಿ (೬೦೦) ದೂರದರ್ಶನ (೬೦೦) ವಿಶ್ರಾಂತಿ ಗೃಹಗಳು (೬೦೧) ಪ್ರವಾಸೋದ್ಯಮ (೬೦೨).

ಸಂ : ಎಸ್. ರಾಜೇಂದ್ರಪ್ಪ

**ಅಧ್ಯಾಯ ೮ — ಆರ್ಥಿಕ ಪ್ರವೃತ್ತಿಗಳು — ೬೦೩ ರಿಂದ ೬೬೩**

ಮಾನವ ಸಂಪತ್ತು (೬೦೩) ಭೂಬಳಕೆ (೬೦೪) ಭೂ ಹಿಡುವಳಿಗಳು (೬೦೬) ಆಹಾರ ಉತ್ಪಾದನೆ (೬೦೯) ತೋಟಗಾರಿಕೆ (೬೧೪) ಅರಣ್ಯ ಸಂಪತ್ತು (೬೧೪) ನೀರಾವರಿ (೬೧೬) ಖನಿಜ ಸಂಪತ್ತು (೬೧೭) ಪಶು ಸಂಪತ್ತು (೬೧೯) ಹೈನುಗಾರಿಕೆ (೬೨೦) ಹಾಲಿನ ಬೆಲೆ (೬೨೦) ಮೀನುಗಾರಿಕೆ (೬೨೧)ರೇಷ್ಮೆ ಉದ್ಯಮ (೬೨೧) ಉದ್ಯೋಗ (೬೨೮) ಜೀವನಮಟ್ಟ (೬೩೩) ಬೆಲೆಗಳು (೬೩೪) ಕೈಗಾರಿಕೆ (೬೪೦) ವಿದ್ಯುಚ್ಛಕ್ತಿ (೬೪೧) ಸಾರಿಗೆ ಸಂಪರ್ಕ (೬೪೩) ಜಿಲ್ಲಾ ಆದಾಯ (೬೪೫ ) ಜಿಲ್ಲಾಯೋಜನೆ (೬೪೯) ಪ್ರವಾಹ ಮತ್ತು ಬರಪೀಡನೆ (೬೫೭)

ಸಂ : ಆರ್. ಮಧ್ವರಾಜ್, ಎಸ್.ವೈ. ಬೆಟ್ಟೇಗೌಡ

**ಅಧ್ಯಾಯ ೯ — ಆಡಳಿತ ಮತ್ತು ರಾಜಸ್ವ — ೬೬೪ ರಿಂದ ೬೯೨**

ಜಿಲ್ಲಾಧಿಕಾರಿ (೬೬೦) ನ್ಯಾಯಾಂಗ ಕರ್ತವ್ಯ (೬೬೬) ಕಂದಾಯ ಕರ್ತವ್ಯಗಳು (೬೬೭) ವಿಶೇಷ ಜಿಲ್ಲಾಧಿಕಾರಿ (೬೬೭) ಉಪವಿಭಾಗಾಧಿಕಾರಿ (೬೬೭) ತಹಶೀಲ್ದಾರ್ (೬೬೮) ಜಿಲ್ಲಾ ತರಬೇತಿ ಸಂಸ್ಥೆ (೬೬೯) ಭೂಕಂದಾಯ (೬೬೯) ಜಿಲ್ಲಾ ಬಂದಿ ವ್ಯವಸ್ಥೆ (೬೭೩) ಇನಾಮುಗಳು (೬೭೩) ಭೂಮಿಯ ಒಡೆತನ (೬೭೪) ಜಹಗೀರುಗಳು (೬೭೪) ಭೂ ಕಂದಾಯ ವಸೂಲಿ (೬೭೪) ಜಮಾಬಂದಿ ಪದ್ಧತಿ (೬೭೭) ಕಂದಾಯ ವಿನಾಯಿತಿ (೬೭೮) ತುಂಡು ಹಿಡುವಳಿಗಳ ಒಗ್ಗೂಡಿಕೆ (೬೭೯) ಭೂ ಸುಧಾರಣೆ (೬೭೯) ಭೂಸ್ವಾಧೀನ (೬೮೦) ಭೂ ನ್ಯಾಯಮಂಡಳಿಗಳು (೬೮೧) ಭೂ ಸುಧಾರಣೆ ಮೇಲ್ಮನವಿ ಪ್ರಾಧಿಕಾರ (೬೮೨) ಸರ್ಕಾರಿ ಜಮೀನಿನ ವಿತರಣೆ (೬೮೨) ವೃತ್ತಿ ತೆರಿಗೆ (೬೮೩) ಐಷಾರಾಮ ತೆರಿಗೆ (೬೮೩) ಕೇಂದ್ರ ಅಬಕಾರಿ ಶುಲ್ಕ (೬೮೩) ಆದಾಯ ತೆರಿಗೆ (೬೮೪) ವಾಣಿಜ್ಯ ತೆರಿಗೆ (೬೮೫) ಮೋಟಾರು ವಾಹನ ತೆರಿಗೆ (೬೮೭) ಛಾಪಾಕಾಗದ ಮತ್ತು ನೋಂದಣಿ (೬೮೮) ಅರಣ್ಯ ಅಭಿವೃದ್ಧಿ ತೆರಿಗೆ (೬೮೮) ರಾಜ್ಯ ಅಬಕಾರಿ ಶುಲ್ಕ (೬೮೯)

ಸಂ : ಜಿ.ಎಂ. ಮುಸ್ತಫಾ

ಅಧ್ಯಾಯ ೧೦ ನ್ಯಾಯಾಡಳಿತ ೬೯೩ ರಿಂದ ೭೩೧

ಪೊಲೀಸ್ ಆಡಳಿತ (೬೯೩) ಗ್ರಾಮೀಣ ರಕ್ಷಣಾದಳ (೭೦೩) ಗೃಹ ರಕ್ಷಕ ದಳ (೭೦೩) ಅಪರಾಧ ತನಿಖೆ ವಿಭಾಗ (೭೦೩) ಶ್ವಾನದಳ (೭೦೩) ಪೊಲೀಸ್ ಬ್ಯಾಂಡ್ (೭೦೩) ಪೊಲೀಸ್ ರೇಡಿಯೋ (೭೦೬) ಗ್ರಾಮೀಣ ಪೊಲೀಸ್ (೭೦೬) ಪೊಲೀಸ್ ಕಲ್ಯಾಣನಿಧಿ (೭೦೬) ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ (೭೦೭) ನ್ಯಾಯಾಡಳಿತ (೭೦೭) ಸಿವಿಲ್ ನ್ಯಾಯಾಲಯಗಳು (೭೦೭) ಸಿವಿಲ್ ಪ್ರಕರಣಗಳು (೭೦೮) ಕ್ರಿಮಿನಲ್ ಪ್ರಕರಣಗಳು (೭೦೯) ಜಿಲ್ಲಾ ಕಾನೂನು ನೆರವು ಸಮಿತಿ (೭೨೭) ಜನತೆ ನ್ಯಾಯಾಲಯ (೭೨೭) ಕುಟುಂಬ ನ್ಯಾಯಾಲಯ (೭೨೭) ಕೇಂದ್ರ ಕಾರಾಗೃಹ (೭೨೮) ಉಪಬಂಧಿಖಾನೆ ಬಾಗಲಕೋಟೆ (೭೨೯) ಉಪಕಾರಾಗೃಹ-ಜಮಖಂಡಿ (೭೨೯) ಜಿಲ್ಲಾ ಗ್ರಾಹಕರ ಪರಿಹಾರ ವೇದಿಕೆ (೭೩೧)

ಸಂ : ಆರ್. ಮಧ್ವರಾಜ್

ಅಧ್ಯಾಯ ೧೧ ಇತರ ಇಲಾಖೆಗಳು ೭೩೨ ರಿಂದ ೭೪೯

ರಾಜ್ಯ ಸರಕಾರದ ಕಛೇರಿಗಳು (೭೩೨) ರಾಜ್ಯ ಸರಕಾರದ ಮಂಡಳಿಗಳು ಹಾಗೂ ನಿಗಮಗಳು (೭೪೪) ಕೇಂದ್ರ ಸರಕಾರದ ಕಛೇರಿಗಳು (೭೧೭)

ಸಂ : ಎಸ್.ಆರ್. ಮೈಲಾರಯ್ಯ

ಅಧ್ಯಾಯ ೧೨ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ೭೫೦ ರಿಂದ ೭೯೩

ಸ್ಥಳೀಯ ಸಂಸ್ಥೆಗಳು (೭೫೦) ಬರೋ ಮುನಿಸಿಪಾಲಿಟಿಗಳು (೭೫೫) ಮೀಸಲಾತಿ (೭೫೫) ಜಿಲ್ಲಾ ಅಭಿವೃದ್ಧಿ ಸಮಿತಿ (೭೫೫) ತಾಲೂಕು ಅಭಿವೃದ್ಧಿ ಮಂಡಳಿಗಳು (೭೫೭) ಮೈಸೂರು ಪುರಸಭೆಗಳ ಕಾಯ್ದೆ (೭೫೮) ಪಂಚಾಯತ್ ರಾಜ್ (೭೬೧) ವಿಜಾಪುರ ನಗರಸಭೆ (೭೬೬) ಬಾಗಲಕೋಟೆ ನಗರಸಭೆ (೭೭೧) ಜಮಖಂಡಿ ಪುರಸಭೆ (೭೭೫) ಮುಧೋಳ ಮುನಿಸಿಪಾಲಿಟಿ (೭೭೬) ಗುಳೇದಗುಡ್ಡ ಪುರಸಭೆ (೭೭೯) ಮಹಾಲಿಂಗಪುರ ಪುರಸಭೆ (೭೮೧) ಇಂಡಿ ಪುರಸಭೆ (೭೮೩) ಪಟ್ಟಣ ಪಂಚಾಯಿತಿ, ತೇರದಾಳ (೭೮೫) ನಗರಾಭಿವೃದ್ಧಿ ಪ್ರಾಧಿಕಾರ (೭೮೮) ವಸತಿ ಯೋಜನೆ (೭೮೯) ಕರ್ನಾಟಕ ಗೃಹ ಮಂಡಳಿ (೭೮೯) ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ (೭೯೧) ಕೊಳಚೆ ನಿರ್ಮೂಲನಾ ಮಂಡಳಿ (೭೯೩)

ಸಂ : ಆರ್.ಜಿ. ಕುಲಕರ್ಣಿ

ಅಧ್ಯಾಯ ೧೩ ಶಿಕ್ಷಣ ಮತ್ತು ಕ್ರೀಡೆ ೭೯೪ ರಿಂದ ೮೩೩

ಪ್ರಾಚೀನ ವಿದ್ಯಾ ಕೇಂದ್ರಗಳು (೭೯೪) ಜೈನ ಕಲಿಕಾ ಕೇಂದ್ರಗಳು (೭೯೬) ಮುಸಲ್ಮಾನರ ಕಾಲದಲ್ಲಿ ಶಿಕ್ಷಣ (೭೯೬) ಸಾಕ್ಷರತೆ (೭೯೭) ಪೂರ್ವ ಪ್ರಾಥಮಿಕ ಶಿಕ್ಷಣ (೭೯೯) ಗಾಂವಠಿ ಶಾಲೆಗಳು (೮೦೧) ಪ್ರಾಥಮಿಕ ಶಿಕ್ಷಣ (೮೦೧) ಕಡ್ಡಾಯ ಪ್ರಾಥಮಿಕ ಶಿಕ್ಷಣ (೮೦೪) ಪ್ರೌಢ ಶಿಕ್ಷಣ (೮೦೫) ಶಿಕ್ಷಕರ ತರಬೇತಿ (೮೦೬) ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು(೮೦೭) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾ ಸಂಸ್ಥೆಗಳು (೮೦೮) ಬಸವೇಶ್ವರ ವಿದ್ಯಾವರ್ಧಕ ಸಂಘ (೮೦೮) ಉರ್ದು ಹಾಗೂ ಮರಾಠಿ ಪ್ರಭಾವ (೮೧೧) ವಾಣಿಜ್ಯ ಶಿಕ್ಷಣ (೮೧೪) ಉರ್ದು ಶಿಕ್ಷಣ (೮೧೫) ವಯಸ್ಕರ ಶಿಕ್ಷಣ (೮೧೬) ಚಿತ್ರಕಲಾ ಶಿಕ್ಷಣ (೮೧೭) ಮರಾಠಿ ಶಿಕ್ಷಣ (೮೧೯) ಸ್ಕೌಟ್ಸ್ ಮತ್ತು ಗೈಡ್ಸ್ (೮೨೦) ಎನ್.ಸಿ.ಸಿ. (೮೨೧) ಪದವಿಪೂರ್ವ ಶಿಕ್ಷಣ (೮೨೩) ಪದವಿ ಶಿಕ್ಷಣ (೮೨೩) ವೈದ್ಯಕೀಯ ಶಿಕ್ಷಣ (೮೨೬) ವಿದ್ಯಾರ್ಥಿ ವಸತಿ ನಿಲಯಗಳು (೮೨೭) ಸೈನಿಕ ಶಾಲೆ (೮೨೮) ಗ್ರಂಥಾಲಯಗಳು (೮೨೯) ಕ್ರೀಡೆ (೮೩೦)

ಸಂ : ಟಿ.ಜಿ. ನರಸಿಂಹಮೂರ್ತಿ

ಅಧ್ಯಾಯ ೧೪ ಸಾಹಿತ್ಯ ಮತ್ತು ಸಂಸ್ಕೃತಿ ೮೩೪ ರಿಂದ ೯೬೫

ಶಾಸನಕವಿಗಳು (೮೩೫) ಪ್ರಾಚೀನ ಕವಿಗಳು (೮೩೬) ವಚನ ಚಳವಳಿ (೮೩೮) ದಾಸಸಾಹಿತ್ಯ (೮೪೦) ಕೀರ್ತನಕಾರರು (೮೪೩) ಅರುಣೋದಯ ಕಾಲ (೮೪೩) ನವೋದಯ ಸಾಹಿತ್ಯ (೮೪೮) ದಲಿತ ಬಂಡಾಯ ಸಾಹಿತ್ಯ (೮೫೭) ಆಧುನಿಕ ವಚನಕಾರರು (೮೫೯) ಮಹಿಳಾ ಸಾಹಿತ್ಯ (೮೬೦) ಮಕ್ಕಳ ಸಾಹಿತ್ಯ (೮೬೪) ಜನಪದ ಸಾಹಿತ್ಯ (೮೬೮) ಜನಪದ ಸಾಹಿತ್ಯ ಸಂಗ್ರಹ ಮತ್ತು ಪುನರುಜ್ಜೀವನ ಕಾರ್ಯ (೮೬೯) ಸಂಸ್ಕೃತ ಸಾಹಿತ್ಯ (೮೭೪) ಮರಾಠಿ ಸಾಹಿತ್ಯ (೮೮೦) ಮರಾಠಿ ಪತ್ರಿಕೆ, ಪುಸ್ತಕಗಳು (೮೮೧) ಮರಾಠಿ ನಾಟಕ ಸಾಹಿತ್ಯ (೮೮೩) ಉರ್ದು ಸಾಹಿತ್ಯ (೮೮೩) ರಂಗಭೂಮಿ (೮೮೬) ನಾಟಕ ಸಾಹಿತ್ಯ (೮೮೬) ವೃತ್ತಿ ರಂಗಭೂಮಿ (೮೯೦) ವೃತ್ತಿ ರಂಗಭೂಮಿಯ ನಟನಟಿಯರು (೮೯೫) ವೃತ್ತಿ ನಾಟಕ ಮಂಡಳಿಗಳು (೯೦೦) ಶ್ರೀ ಕೃಷ್ಣ ಪಾರಿಜಾತ (೯೦೯) ಶ್ರೀ ಕೃಷ್ಣ ಪಾರಿಜಾತ ಕಲಾವಿದರು ಮತ್ತು ತಂಡಗಳು (೯೧೧) ಬೈಲಾಟಗಳು (೯೧೨) ಹೆಜ್ಜೆಮೇಳ (ಕರಬಲ್ ಕುಣಿತ) ಹಾಗೂ ಕೋಲಾಟ (೯೧೨) ಕೀಲು ಕುದುರೆ ಕುಣಿತ (೯೧೩) ವೀರಗಾಸೆ (೯೧೩) ತೊಗಲು ಗೊಂಬೆಯಾಟ (೯೧೩) ಭಜನಾ ಮೇಳಗಳು (೯೧೩) ಕರಡಿಮಜಲು ಮೇಳಗಳು (೯೧೪) ಸಂಭಾಳ ವಾದನ ಮೇಳಗಳು (೯೧೫) ಡೊಳ್ಳಿನ ಕುಣಿತ ಮತ್ತು ಡೊಳ್ಳಿನ ಪದ (೯೧೭) ಹಲಗಿ ಮೇಳಗಳು (ಸಂಪ್ರದಾನಿ ವಾದನ) (೯೧೭) ತಾಶಾ ವಾದನ (೯೧೮) ಗೊಂಧಳಿ ಪದಗಳು (೯೧೮) ಏಕತಾರಿ ಹಾಡುಗಳು (೯೧೮) ಲಾವಣಿ ಹಾಡು (೯೧೮) ಲಂಬಾಣಿ ನೃತ್ಯಗಳು (೯೧೮) ಸಂಪ್ರದಾಯ ಹಾಡುಗಳನ್ನು ಹಾಡುವವರು (೯೧೯) ಸಂಘ ಸಂಸ್ಥೆಗಳು (೯೧೯) ಕನ್ನಡ ಸಾಹಿತ್ಯ ಸಮ್ಮೇಳನಗಳು (೯೨೨)

ಸಂ : ಕೆ.ಎಂ. ವಿಜಯಲಕ್ಷ್ಮಿ

ಚಿತ್ರಕಲೆ (೯೨೨) ಇತಿಹಾಸ ಪೂರ್ವ ಚಿತ್ರಗಳು (೯೨೨) ಐತಿಹಾಸಿಕ ಕಾಲ (೯೨೪) ಆದಿಲ್ ಶಾಹಿಗಳ ಚಿತ್ರಕಲೆ (೯೨೭) ಗುಳೇದಗುಡ್ಡದ ಭಿತ್ತಿಚಿತ್ರ (೯೩೩) ಸಮಕಾಲೀನ ಚಿತ್ರಕಲೆ (೯೩೪) ಕಲಾ ಶಿಕ್ಷಣ (೯೩೭) ಕಲಾ ಸಂಸ್ಥೆಗಳು (೯೩೯) ಸಂಗೀತ (೯೪೦) ಆಧುನಿಕ ಕಾಲ (೯೪೩) ಸಂಗೀತ ಶಾಲೆಗಳು (೯೪೪) ವಾಸ್ತುಶಿಲ್ಪ, ಶಿಲ್ಪ (೯೪೭) ಶಿಲ್ಪಿಗಳು (೯೫೧) ಸಾಂಪ್ರದಾಯಿಕ ಶಿಲ್ಪಿಗಳು (೯೫೨) ಶಿಲ್ಪ ಕಲಾವಿದರು (೯೫೩) ಪುರಾತತ್ವ ಇಲಾಖೆಯ ವಸ್ತು ಸಂಗ್ರಹಾಲಯ (೯೫೪) ಪತ್ರಿಕೋದ್ಯಮ (೯೫೪) ಸರ್ಕಸ್ ಮತ್ತು ಸಿನಿಮಾ (೯೬೩)

ಸಂ : ಡಾ. ಅ. ಲಕ್ಷ್ಮೀನರಸಿಂಹನ್

ಅಧ್ಯಾಯ ೧೫ ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳು ೯೬೬ ರಿಂದ ೯೯೫

ಆರೋಗ್ಯ ಸಂಸ್ಥೆಗಳು ಹಿನ್ನೆಲೆ (೯೬೬) ಜನನ ಮರಣ ಅಂಕಿ-ಅಂಶಗಳು (೯೭೧) ಸಾಂಕ್ರಾಮಿಕ ರೋಗಗಳು (೯೭೫) ಆಯುರ್ವೇದ (೯೭೯) ಆರೋಗ್ಯ ಸಂಸ್ಥೆಗಳು (೯೮೦) ಗ್ರಾಮೀಣ ಆರೋಗ್ಯ ಕಾರ್ಯಕ್ರಮ (೯೮೬) ಕುಟುಂಬ ಕಲ್ಯಾಣ (೯೮೯) ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ (೯೯೧) ಶಾಲಾ ಆರೋಗ್ಯ ಕಾರ್ಯಕ್ರಮ (೯೯೧) ಪಲ್ಸ್ ಪೋಲಿಯೋ ನಿರೋಧಕ ಕಾರ್ಯಕ್ರಮ (೯೯೨) ಮೌಖಿಕ ಪುನರ್ಜಲೀಕರಣ (ಓ.ಆರ್.ಎಸ್) ಯೋಜನೆ (೯೯೨) ಭಾರತೀಯ ಕುಟುಂಬ ಯೋಜನಾ ಸಂಘ (೯೯೨) ಕುಟುಂಬ ಕಲ್ಯಾಣ ಸಮಿತಿಗಳು (೯೯೩) ಭಾರತೀಯ ವೈದ್ಯಕೀಯ ಸಂಘ (೯೯೪) ಔಷಧಿ ನಿಯಂತ್ರಣ (೯೯೪)

ಸಂ : ಆರ್.ಜಿ. ಕುಲಕರ್ಣಿ

ಅಧ್ಯಾಯ ೧೬ ಇತರ ಸಮಾಜ ಸೇವಾ ಸೌಲಭ್ಯಗಳು ೯೯೬ ರಿಂದ ೧೦೩೦

ಕಾರ್ಮಿಕ ಕಲ್ಯಾಣ (೯೯೬) ಕಾರ್ಮಿಕ ಸಂಘಟನಾ ಚಳವಳಿ (೯೯೯) ಕಾರ್ಮಿಕ ಕಲ್ಯಾಣ ಮಂಡಳಿ (೯೯೯) ನೌಕರರ ರಾಜ್ಯ ವಿಮಾ ಯೋಜನೆ (೧೦೦೧) ಪರಿಶಿಷ್ಟ ಜಾತಿಗಳ ಕಲ್ಯಾಣ (೧೦೦೧) ಆರ್ಥಿಕಾಭಿವೃದ್ಧಿ ಯೋಜನೆಗಳು (೧೦೦೪) ಪರಿಶಿಷ್ಟ ಪಂಗಡದವರ ಕಲ್ಯಾಣ (೧೦೦೬) ಜಿಲ್ಲಾ ಕಾನೂನು ನೆರವು ಸಮಿತಿ (೧೦೦೮) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ (೧೦೦೯) ಹಿಂದುಳಿದ ವರ್ಗದವರ ಕಲ್ಯಾಣ (೧೦೧೧) ದೇವದಾಸಿ ಪದ್ಧತಿ (೧೦೧೪) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (೧೦೧೫) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (೧೦೧೫) ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ (೧೦೧೬) ವಕ್ಫ್ ಸಂಸ್ಥೆಗಳು (೧೦೨೫) ವೃದ್ಧಾಪ್ಯವೇತನ (೧೦೨೭) ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳು (೧೦೨೮) ರೋಟರಿ ಮತ್ತು ಲಯನ್ಸ್ ಕ್ಲಬ್‌ಗಳು (೧೦೨೯) ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ (೧೦೨೯)

ಸಂ : ಜಿ.ಎಂ. ಮುಸ್ತಫಾ

ಅಧ್ಯಾಯ ೧೭ ಪ್ರೇಕ್ಷಣೀಯ ಸ್ಥಳಗಳು ೧೦೩೧ ರಿಂದ ೧೧೬೯

ಸಂ : ಎಸ್.ಎ. ಜಗನ್ನಾಥ್

ಸೇರ್ಪಡೆ ೧೧೭೦ ರಿಂದ ೧೧೭೩

ಜಿಲ್ಲೆಯ ಗ್ರಾಮ ಹಾಗೂ ನಗರ ಪ್ರದೇಶಗಳು ೧೧೭೪ ರಿಂದ ೧೧೯೯

ಸಂ : ಎಸ್. ರಾಜೇಂದ್ರಪ್ಪ

ಆಯ್ದ ಆಕರ ಗ್ರಂಥಗಳು ೧೨೦೦ ರಿಂದ ೧೨೧೪

ಶಬ್ದ ಸೂಚಿ ೧೨೧೫ ರಿಂದ ೧೨೩೨

ಒಪ್ಪೋಲೆ ೧೨೩೩ ರಿಂದ ೧೨೩೮

ಆಯ್ದ ಅಂಕಿ-ಅಂಶಗಳು ೧೨೩೯ ರಿಂದ ೧೨೪೮

ಜಿಲ್ಲಾ ನಕಾಶೆ


* * *

# ಗ್ಯಾಸೆಟಿಯರ್ ಸಲಹಾ ಸಮಿತಿ

**ಅಧ್ಯಕ್ಷರು**

ಶ್ರೀ ಬಿ.ಕೆ. ಭಟ್ಟಾಚಾರ್ಯ, ಐ.ಎ.ಎಸ್
ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ.

**ಸದಸ್ಯರು**

ಶ್ರೀ ಅ.ರಾ. ಚಂದ್ರಹಾಸ ಗುಪ್ತ, ಐ.ಎ.ಎಸ್
ಕಾರ್ಯದರ್ಶಿಗಳು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು-೫೬೦ ೦೦೧.

ಡಾ. ಅ. ಸುಂದರ
ನಿವೃತ್ತ ನಿರ್ದೇಶಕರು,
ಸ್ನಾತಕೋತ್ತರ ಕೇಂದ್ರ, ಕರ್ನಾಟಕ ವಿಶ್ವವಿದ್ಯಾಲಯ
ಸೊಲ್ಲಾಪುರ ರಸ್ತೆ, ವಿಜಾಪುರ-೫೮೬ ೧೦೩.

ಡಾ. ಎಂ.ಎಂ. ಕಲಬುರ್ಗಿ,
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ,
ಹಂಪಿ-೫೮೩ ೨೭೬.

ರೆ|| ಡಾ. ಸಿ.ಜೆ. ಸಾಲ್ಡಾನಾ,
ನಿವೃತ್ತ ಪ್ರಾಧ್ಯಾಪಕರು,
ಸೆಂಟ್ ಜೋಸೆಫ್ ಕಾಲೇಜು,
ಬೆಂಗಳೂರು-೫೬೦ ೦೦೧.

ಪ್ರೊ. ಲಕ್ಷ್ಮಣ್ ತೆಲಗಾವಿ,
ಮುಖ್ಯಸ್ಥರು, ಇತಿಹಾಸ ವಿಭಾಗ,
ಕನ್ನಡ ವಿಶ್ವವಿದ್ಯಾಲಯ,
ಹಂಪಿ-೫೮೩ ೨೭೬.

ಶ್ರೀ ಎನ್.ಡಿ. ಬಗರಿ
ನಿವೃತ್ತ ನಿರ್ದೇಶಕರು,
ರಾಜ್ಯ ಗ್ರಂಥಾಲಯ ಇಲಾಖೆ,
ಬೆಂಗಳೂರು.

ಡಾ. (ಶ್ರೀಮತಿ) ಕಮಲಾ ಹಂಪನಾ,
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ನಂ.೧೦೭೯, ೧೮ಎ ಮುಖ್ಯರಸ್ತೆ, ೫ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-೫೬೦ ೦೧೦.

ಶ್ರೀ ಎಂ.ಬಿ. ಪಾಟೀಲ್,
ನಿವೃತ್ತ ನಿರ್ದೇಶಕರು,
ರಾಷ್ಟ್ರೀಯ ಸಹಕಾರಿ ತರಬೇತಿ ಕೇಂದ್ರ
ಪದ್ಮನಾಭನಗರ, ಬೆಂಗಳೂರು.

ಡಾ. ಸೂರ್ಯನಾಥ ಯು. ಕಾಮತ್
ನಿವೃತ್ತ ಮುಖ್ಯ ಸಂಪಾದಕರು,
ನಂ. ೭೯ಬ, ೬ನೇ ಕ್ರಾಸ್, ೧೧ನೇ ಮುಖ್ಯರಸ್ತೆ,
ಹನುಮಂತನಗರ, ಬೆಂಗಳೂರು-೫೬೦ ೦೧೯.

**ವಿಶೇಷ ಸದಸ್ಯರು**

**(ವಿಜಾಪುರ ಜಿಲ್ಲಾ ಗ್ಯಾಸೆಟಿಯರ್‌ಗಾಗಿ)**

ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ,
ಪಿ.ಡಿ.ಜೆ. ಪ್ರೌಢಶಾಲೆ ಬಳಿ,
ದರ್ಬಾರ್ ಗಲ್ಲಿ, ವಿಜಾಪುರ-೫೮೬ ೧೦೧.

ಡಾ.ಎಸ್.ಕೆ. ಕೊಪ್ಪ,
ಬಿ.ಆರ್.ಡಿ. ಮಹಿಳಾ ಕಾಲೇಜು,
ಇಂಡಿ, ವಿಜಾಪುರ ಜಿಲ್ಲೆ-೫೮೬ ೨೦೯.

**ಸದಸ್ಯ ಕಾರ್ಯದರ್ಶಿ**

ಡಾ. ಆರ್. ಮುನಿಸ್ವಾಮಿ,
ಮುಖ್ಯ ಸಂಪಾದಕರು,
ಕರ್ನಾಟಕ ಗ್ಯಾಸೆಟಿಯರ್ ಇಲಾಖೆ,
ಬೆಂಗಳೂರು-೫೬೦ ೦೦೯.

# ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸಿಬ್ಬಂದಿ ವರ್ಗ

| | |
|---|---|
| ಡಾ. ಆರ್. ಮುನಿಸ್ವಾಮಿ | ಮುಖ್ಯ ಸಂಪಾದಕರು |
| ಶ್ರೀ ಎಂ.ಬಿ. ಪಾಟೀಲ್ | ಸಂಪಾದಕರು (ನಿವೃತ್ತಿ ೩೦.೪.೯೮ರಂದು) |
| ಶ್ರೀ ಎಸ್.ಎ. ಜಗನ್ನಾಥ್ | ಸಂಪಾದಕರು |
| ಶ್ರೀ ಎಸ್.ಆರ್. ಮೈಲಾರಯ್ಯ | ಸಂಪಾದಕರು |
| ಶ್ರೀ ಟಿ.ಜಿ. ನರಸಿಂಹಮೂರ್ತಿ | ಸಂಪಾದಕರು |
| ಶ್ರೀ ಆರ್.ಜಿ. ಕುಲಕರ್ಣಿ | ಸಂಪಾದಕರು |
| ಶ್ರೀ ಆರ್. ಮಧ್ವರಾಜ್ | ಸಂಪಾದಕರು |
| ಶ್ರೀ ಎಸ್.ಎನ್. ರಾಜು | ಸಂಪಾದಕರು |
| ಶ್ರೀ ಎಸ್. ರಾಜೇಂದ್ರಪ್ಪ | ಸಂಪಾದಕರು |
| ಶ್ರೀ ಜಿ.ಎಂ. ಮುಸ್ತಫಾ | ಸಂಪಾದಕರು |
| ಶ್ರೀ ಕೆ.ಆರ್. ಕಮಲೇಶ್ | ಸಂಪಾದಕರು(೮.೪.೯೯ರವರೆಗೆ) |
| ಶ್ರೀ ಎಸ್.ವೈ. ಬೆಟ್ಟೇಗೌಡ | ಸಂಪಾದಕರು(೩.೧೧.೯೮ರಿಂದ) |
| ಶ್ರೀ ಸ್ಟೀವನ್ ಪಾಲ್ | ಅನ್ವೇಷಕರು |
| ಶ್ರೀ ಜಿ. ಭಾನುದಾಸ್ | ಅನ್ವೇಷಕರು |
| ಡಾ. ಅ. ಲಕ್ಷ್ಮೀನರಸಿಂಹನ್ | ಅನ್ವೇಷಕರು |
| ಶ್ರೀಮತಿ ಕೆ.ಎಂ. ವಿಜಯಲಕ್ಷ್ಮಿ | ಅನ್ವೇಷಕರು |
| ಶ್ರೀ ಬಿ.ಸಿ. ರೇವಣ್ಣ | ಅಧೀಕ್ಷಕರು |
| ಶ್ರೀ ಎಸ್. ರಾಘವೇಂದ್ರರಾವ್ | ಪ್ರಥಮ ದರ್ಜೆ ಸಹಾಯಕರು |
| ಶ್ರೀಮತಿ ಎಸ್. ರಮಾ | ಪ್ರಥಮ ದರ್ಜೆ ಸಹಾಯಕರು |
| ಶ್ರೀಮತಿ ಕೆ.ಎಸ್. ಸುಬ್ಬಲಕ್ಷ್ಮಿ | ದ್ವಿತೀಯ ದರ್ಜೆ ಸಹಾಯಕರು |
| ಶ್ರೀ ಜಿ.ಎಸ್. ಪಾಟೀಲ್ | ಗ್ರಂಥಪಾಲಕರು |
| ಶ್ರೀಮತಿ ಪಿ. ಸುನೀತ | ಶೀಘ್ರಲಿಪಿಗಾರರು |
| ಶ್ರೀ ಎಂ. ಬಾಬು | ವಾಹನ ಚಾಲಕರು |
| ಶ್ರೀ ಟಿ.ಬಿ. ಕುಶಾಲಪ್ಪ | ವಾಹನ ಚಾಲಕರು |
| ಶ್ರೀ ಎಚ್. ಚಂದ್ರ | 'ಡಿ' ವರ್ಗದ ಸಿಬ್ಬಂದಿ |
| ಶ್ರೀ ಬಿ.ಸಿ. ಸುರೇಶ್‌ಕುಮಾರ್ | ದಫೇದಾರ್ |
| ಶ್ರೀ ಎಂ. ಹರೀಶ್‌ರಾವ್ | 'ಡಿ' ವರ್ಗದ ಸಿಬ್ಬಂದಿ (೧೨.೬.೯೮ ರಿಂದ) |